SRUJANI

ISSN: 2583-3510

Indian Journal of Innovative Research and Development (SIJIRD)

Volume-1 (02), May-June 2022, Pp. 8-11
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಅಂದಿನ ತಿರುಳ್ಗನ್ನಡ ಪುಲಿಗೆರಿಯೇ ಇಂದಿನ ಲಕ್ಷ್ಮೇಶ್ವರ

**ಡಾ. ಮಂಜುನಾಥ ಬ. ಪಾಟೀಲ***

*ಮುಖ್ಯಸ್ಥರು, ಕನ್ನಡ ವಿಭಾಗ, ಪುರಸಭೆಯ ಪದವಿ ಕಲಾ ಮಹಾವಿದ್ಯಾಲಯ, ತಾ: ಲಕ್ಷ್ಮೇಶ್ವರ, ಜಿ: ಗದಗ

***Abstract:***

ಲಕ್ಷ್ಮೇಶ್ವರವು ಶಾಸನೋಕ್ತವಾಗಿ ಪುಲಿಗೆರೆ, ಹುಲಿಗೆರೆ, ಪುರಿಗೆರೆ, ಪೋರಿಗೆರೆ, ಪುಲಿಕಾನಗರ ಎಂಬ ಹೆಸರುಗಳಿಂದ ಅಸ್ತಿತ್ವದಲ್ಲಿತ್ತು. ಲಕ್ಷ್ಮೇಶ್ವರದಲ್ಲಿ ದೊರೆಯುವ ಅತೀ ಪ್ರಾಚೀನವಾದ ಚಾಲುಕ್ಯ ದೊರೆಯಾದ ಎರೆಯಮ್ಮನ (ಕ್ರಿ.ಶ. ಸುಮಾರು 600) ಸಂಸ್ಕೃತ ಶಾಸನದಲ್ಲಿ 'ಪುಲಿಗೆರೆ' ಎಂಬ ಹೆಸರೇ ಪ್ರಾಚೀನವಾಗಿದ್ದು ಪುಲಿಕರ, ಪುರಿಕರಗಳು ನಂತರದ ರೂಪಗಳೆಂದು ಹೇಳಬಹುದು. ಇದಲ್ಲದೇ ಪುಲಿಗೆರೆ ಎಂಬುದನ್ನು ಕೆಲವು ಸಲ ವ್ಯಾಘ್ರಪುರವೆಂದು ಭಾಷಾಂತರಿಸಲಾಗಿದೆ. ಪುಲಿಗೆರೆ ಎಂಬ ರೂಪ ಕಂಡು ಬರುತ್ತದೆ. ಆದುದರಿಂದ ಪುಲಿಗೆರೆ ಎಂಬ ಹೆಸರಿನ ಬಗ್ಗೆ ಇಲ್ಲಿ ದಂತಕಥೆಗಳನ್ನು ಹೇಳುತ್ತಾರೆ.

***Key Words:*** ಲಕ್ಷ್ಮೇಶ್ವರ, ಪುಲಿಗೆರೆ, ವ್ಯಾಘ್ರಪುರ, ತಿರುಳ್ಗನ್ನಡ.

**ಪೀಠಿಕೆ**

ಲಕ್ಷ್ಮೇಶ್ವರವನ್ನು ಹಿಂದೆ ಪುಲಿಗೆರೆ ಎಂಬ ಹೆಸರಿನಿಂದ ಗುರುತಿಸಲಾಗುತಿತ್ತು. ಹಿಂದಿನ ಕಾಲದಲ್ಲಿ ಈ ಲಕ್ಷ್ಮೇಶ್ವರದಲ್ಲಿ ಹೆಚ್ಚಾಗಿ 'ಹುಲಿಗಳು' ವಾಸಿಸುತ್ತಿದ್ದವು ಅದಕ್ಕೆ ಈ ಊರಿಗೆ ಪುಲಿಗೆರೆ ಎಂಬ ಹೆಸರು ಬಂದಿದೆ ಎನ್ನುತ್ತಾರೆ ಇಲ್ಲಿಯ ಜನರು. ಅಲ್ಲದೇ ಹಿಂದೆ 'ಪ' ಕಾರವು 'ಹ'ಕಾರವಾಗಿ ಪುಲಿಗೆರೆ ಎಂಬ ಹೆಸರು 'ಹುಲಿಗೆರೆ' ಎಂದು ಕರೆಯಿಸಿಕೊಂಡಿರಬಹುದು. ಏಕೆಂದರೆ ಹುಲಿಗೆರೆ ಎಂಬ ಹೆಸರು ಲಕ್ಷ್ಮೇಶ್ವರದ ಒಂದು ಬಡಾವಣೆಯ (ಓಣಿ) ಹೆಸರಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಪುಲಿಗೆರೆಯ ಒಂದು ಶಾಸನದಲ್ಲಿ ಈ ನಾಡಿನಲ್ಲಿ 'ಹುಲಿಯಕೆರೆ' (Tank of Tiger) ಇದ್ದುದರಿಂದ ಇದನ್ನು ಹುಲಿಯಕೆರೆ, ಪುಲಿಯಕೆರೆ, ಪುಲಿಗೆರೆ ಎಂದು ಹೇಳಿದೆ. ಅಷ್ಟೇ ಅಲ್ಲದೇ ಇಲ್ಲಿಯ ಸೋಮಪಂಡಿತ ಒಡೆಯರ ಮಗನಾದ 'ಪುಲಿಒಡೆಯ'ರು ಈ ನಾಡನ್ನು ಆಳಿದ್ದರಿಂದ ಇದಕ್ಕೆ ಪುಲಿಗೆರೆ ಎಂಬ ಹೆಸರು ಬಂದಿದೆ ಎಂದು ಹೇಳಬಹುದು. ಕಾರಣ ಇಂದಿಗೂ ಪುಲಿಗೆರೆಯ ಸೋಮನಾಥ ದೇವರ ಪರಾಕುವಿನಲ್ಲಿ ಪುಲಿ ಒಡೆಯನನ್ನು ಘೋಷಿಸುವ ವಾಡಿಕೆ ಇದೆ.

ಪ್ರಾಚೀನ ಪುಲಿಗೆರೆಯು ಆಧುನಿಕ ಲಕ್ಷ್ಮೇಶ್ವರವಾದ ಬಗೆಯನ್ನು ತಿಳಿಯುವುದು ಅವಶ್ಯಕವಾಗಿದೆ. ಚಾಲುಕ್ಯ ಚಕ್ರವರ್ತಿಯಾದ ಎರಡನೆಯ ಸೋಮೇಶ್ವರನ 1075–1076ನೇ ಶಾಸನದಲ್ಲಿ ಮಹಾಮಂಡಳೇಶ್ವರನಾದ ಲಕ್ಷ್ಮಣರಸನು 1071–1072ರಲ್ಲಿ ಪುಲಿಗೆರೆ–300 ಬೆಳ್ವಲ–300ಗಳನ್ನು ಆಳುತ್ತಿದ್ದನೆಂದು ವ್ಯಕ್ತವಾಗಿದೆ. ಲಕ್ಷ್ಮಣರಸನ ಆಳ್ವಿಕೆಯ ಸ್ಮಾರಕವಾಗಿ ಪುಲಿಗೆರೆಯನ್ನು ಅಂದಿನಿಂದ ಲಕ್ಮಣೇಶ್ವರ ಎಂದು ಕರೆಯಲಾಯಿತು. ಆತ ತನ್ನ ಹೆಸರಿನ ಶಿವಾಲಯ ಕಟ್ಟಿಸಿ ಅದಕ್ಕೆ ಲಕ್ಷ್ಮಣೇಶ್ವರ ಎಂದು ಹೆಸರಿಸಿದನು. ಬರಬರುತ್ತಾ ಜನ ಸಾಮಾನ್ಯ ಬಾಯಲ್ಲಿ ಲಕ್ಮಣೇಶ್ವರ, ಲಕ್ಮೇಶ್ವರ ನಂತರ ಲಕ್ಷ್ಮೇಶ್ವರ ಎಂಬ ಹೆಸರು ಬಂದಿರುವುದು ವ್ಯಕ್ತವಾಗುತ್ತದೆ. ಲಕ್ಷ್ಮೇಶ್ವರದ 1074ನೇ ಶಾಸನವೂ ಸಹ ಈ ಮಾತನ್ನೇ ಸಮರ್ಥಿಸಿದೆ. ಕಾಲಾ ನಂತರದಲ್ಲಿ ಈ ದೇವಾಲಯ ಪ್ರಸಿದ್ಧಿ ಪಡೆದು ಆ ಹೆಸರೇ ಊರಿಗೆ ಅನ್ವಯಿಸಿ ಲಕ್ಷ್ಮೇಶ್ವರವಾಯಿತು. ಈ ಲಕ್ಷ್ಮಣಲಿಂಗನ ಶಿವಾಲಯವು ಈ ಊರಿನ ಹಿರೇಬಣದಲ್ಲಿದೆ.

ಗದಗ ಜಿಲ್ಲೆಯಲ್ಲಿ ಗದಗ ನಂತರದ ದೊಡ್ಡ ನಗರವೇ ಲಕ್ಷ್ಮೇಶ್ವರ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ,

ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಮುಖ್ಯವಾಗಿ ಭಾವೈಕ್ಯತೆಯ ಸಂಕೇತವಾಗಿ ಅತ್ಯಂತ ಪ್ರಸಿದ್ಧಿ ಪಡೆದ ಪುಲಿಗೆರೆಯೇ ಇಂದಿನ ಲಕ್ಷ್ಮೇಶ್ವರ. ಕರ್ನಾಟಕದಲ್ಲಿ ಪುಲಿಗೆರೆಗೆ ತನ್ನದೇ ಆದ ಭವ್ಯ ಪರಂಪರೆ ಇದೆ. ಅಂದಿನ ಪುಲಿಗೆರೆಯು ನಾಡೋಜ ಪಂಪನ ತಿರುಳ್ಗನ್ನಡದ ಬೀಡು. ಆದಯ್ಯನ ಧಾರ್ಮಿಕ ನೆಲವೀಡು, ಲಕ್ಷ್ಮರಸನ ಸಂಪದ್ಭರಿತ ನಾಡು. ಮೇರು ಶಿಲ್ಪ–ಕಲೆಗಳ ಗೂಡು. ಇಂಥ ಐತಿಹಾಸಿಕ ಪುಲಿಗೆರೆ ಇಂದಿಗೂ ಸತ್ವ ಹಾಗೂ ಸತ್ವರಂಪರೆಯನ್ನು ಉಳಿಸಿ, ಬೆಳಸಿಕೊಂಡು ಬಂದಿದೆ.

ಕವಿರಾಜ ಮಾರ್ಗಾಕಾರ ಒಂದೆಡೆಗೆ ಪುಲಿಗೆರೆಯ ಬಗೆಗೆ ಈ ರೀತಿ ಉಲ್ಲೇಖಿಸಿದ್ದಾನೆ.

***ಅದರೊಳಗಂ ಕಿಸುವೊೞಲಾ***

***ವಿದತ ಮಹಾಕೊಪಣ ನಗರದಾ ಪುಲಿಗೆರೆಯಾ***

***ಸದಭಿಸ್ತುತಮಪ್ಪೊಕ್ಕುಂ***

***ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್***

ಅದು ಆ ಕಾಲದಲ್ಲಿಯೇ ಕಿಸುವಳಲ್, ಕೋಪಣನಗರ ವಕ್ಕುಂದದಂತೆ, ಕನ್ನಡ ನಾಡಿನ ಒಂದು ಸ್ವತಂತ್ರ ಆಡಳಿತೆಯ ತಿರುಳ್ಗನ್ನಡ ನಾಡಾದ ಪುಲಗೆರೆ ಮುನ್ನೂರ ರಾಜಧಾನಿಯಾಗಿತ್ತು ಎಂದು ತಿಳಿದು ಬರುತ್ತದೆ.

***ಪಂಪನ ಪೆಂಪಿನ ವಾಣಿಯಿಂದಲೇ ಕೇಳುವದಾದರೆ***

***ರಾಜದ್ರಾಜಕ ಮೆನಿಸಿದ***

***ಸಾಜದ ಪುಲಿಗೆರೆಯ ತಿರುಳ್ ಕನ್ನಡದೊಳ್ ನಿ***

***ರ್ವ್ಯಾಜದೆ ಸಕದೊಳ್ ಪುದಿರಂ***

***ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ***

ಅಂದರೆ ಲಕ್ಷ್ಮೇಶ್ವರವು ಅಂದು ಅಚ್ಚಕನ್ನಡದ ಪ್ರದೇಶವಾಗಿತ್ತು. ಆ ಭಾಷೆಯನ್ನೇ ತನ್ನ ಕಾವ್ಯಕ್ಕೆ ಬಳಸಿಕೊಂಡಿರುವುದು ಹೆಮ್ಮೆಯ ವಿಷಯ ಎಂದಿದ್ದಾನೆ ಮಹಾಕವಿ ಪಂಪ.

ಇಲ್ಲಿ ಇಂದಿಗೂ ತನ್ನ ಪ್ರಾಚೀನ ಪರಂಪರೆಯನ್ನು ಬಿಂಬಿಸುವ ಅನೇಕ ದೇವಾಲಯ, ಬಸದಿ ಹಾಗೂ ಮಸೀದಿಗಳು ಅಚ್ಚಳಿಯದೇ ಉಳಿದಿವೆ. ಅದರಲ್ಲಿ ಪ್ರಮುಖವಾದವುಗಳೆಂದರೆ

**ಸೋಮೇಶ್ವರ ದೇವಾಲಯ**

ಈ ಪ್ರದೇಶವನ್ನು ಸರ್ವೇಶ್ವರನೆಂಬ ಮಹಾ ಮಾಂಡಲಿಕ ಆಳುತ್ತಿದ್ದಾಗ ; ಆತನಿಗೆ ಸೋಮದೇವನೆಂಬ ಮಗ ಹುಟ್ಟಿದನು. ಪುತ್ರೋತ್ಸವದ ಈ ಶುಭ ಸಂದರ್ಭದಲ್ಲಿ ಗುರುಗಳ ಅನುಜ್ಞೆಯಂತೆ ಕ್ರಿ.ಶ.1096ರಲ್ಲಿ ಸರ್ವೇಶ್ವರನು ಒಂದು ದೇವಾಲಯವನ್ನು ಕಟ್ಟಿಸಿದನಂತೆ. ಅದೇ ಇಂದಿನ ಸೋಮೇಶ್ವರ ದೇವಾಲಯ.

ಕನ್ನಡ ಸಾಹಿತ್ಯದಲ್ಲಿ ಪುಲಿಗೆರೆಯ ಸೋಮೇಶ್ವರನಿಗೆ ದೊರೆತ ಮಹತ್ವವು ಮತ್ತಾವ ದೇವರಿಗೆ ಹಾಗೂ ದೇವಾಲಯಕ್ಕೂ ಸಿಕ್ಕಿಲ್ಲವೆಂದು ಹೇಳಬಹುದು. ಹುಲಿಗೆರೆ ಬಣದಲ್ಲಿರುವ ಶ್ರೀ ಸೋಮೇಶ್ವರ ಈ ಊರಿನ ಕುಲದೇವತೆ. ಗುಡಿಯ ಪ್ರಾಕಾರ ವಿಶಾಲವಾಗಿದೆ. ಒಂದು ಕಾಲಕ್ಕೆ ಪೂರ್ವದಲ್ಲಿ ಮಹಾದ್ವಾರಗಳಿದ್ದವಂತೆ. ಎಡಬಲಗಳಲ್ಲಿ ಚಂದ್ರ ಶಾಲೆಗಳಿವೆ. ಅಲ್ಲಿಯೇ ಆದಯ್ಯ ಮುತ್ತು ರತ್ನದ ವ್ಯಾಪಾರಕ್ಕೆ ಬಂದಿದ್ದನಂತೆ. ಕೆರವೊಡಿ ಕಲ್ಲಿನಲ್ಲಿ ಕೆತ್ತಲ್ಪಟ್ಟ ಚಾಲುಕ್ಯ ಮಾದರಿಯ ದೇವಸ್ಥಾನ ಅತ್ಯಂತ ನಯನ ಮನೋಹರ. ಮಾಘ ಶುದ್ಧ ಬಹುಳ ದಿನದ ಮುಂಜಾನೆಯ ಸೂರ್ಯನ ಪ್ರಥಮ ಕಿರಣ, ಗರ್ಭಗುಡಿಯ ಶ್ರೀ ಸೋಮನಾಥನ ಮೇಲೆ ಬೀಳುವಂತೆ ಈ ದೇವಾಲಯವನ್ನು ನಿರ್ಮಿಸಲಾಗಿದೆ.

ಶೈವ ದೇವಾಲಯಗಳಲ್ಲಿ ಬರುವ ಲಿಂಗ ಹಾಗೂ ಎದುರುಗಡೆಯ ನಂದಿ ಇಲ್ಲಿಲ್ಲ. ಇಲ್ಲಿನ ವೈಶಿಷ್ಟ್ಯವೆಂದರೆ ಶಿವಪಾರ್ವತಿಯರು ನಂದಿಯನ್ನೇರಿ ಕುಳಿತಿದ್ದಾರೆ. ಹರಿಹರನ ಗಿರಿಜಾ ಕಲ್ಯಾಣದಲ್ಲಿ ಬರುವ ವರ್ಣನೆಯಂತೆ ಈಶ್ವರನು ಪರ್ವತರಾಜನ ಪುತ್ರಿ ಪಾರ್ವತಿಯನ್ನು ಮದುವೆಯಾಗಿ, ವೃಷಭಾರೂಢನಾಗಿ ಕೈಲಾಸಕ್ಕೆ ಹೊರಟ ಚಿತ್ರಣವಿರಬೇಕೆಂದು ಸ್ವಯಂಭೂ ಸೋಮೇಶ್ವರನನ್ನು ನೋಡಿದಾಗ ಕಲ್ಪನೆಗೆ ಬರುತ್ತದೆ.

ಆದಯ್ಯ ಎಂಬ ವ್ಯಾಪಾರಿ, ಸೌರಾಷ್ಟ್ರದಿಂದ ಪುಲಿಗೆರೆಗೆ ಬಂದು ಇಂದಿನ ವಾಚೇಶ್ವರ ದೇವಾಲಯದಲ್ಲಿ ತಂಗಿದ್ದನಂತೆ. ಆದಯ್ಯ ಜೈನ ಯುವತಿ ಪಾರಿಶೆಟ್ಟಿಯ ಮಗಳು ಪದ್ಮಾವತಿಯನ್ನು ಮೋಹಿಸಿ ಮದುವೆಯಾದ. ಅವಳಿಗೆ ಶಿವದೀಕ್ಷೆ ನೀಡಿದ. ಈತನು ತನ್ನ ಮಾವನ ಮಾತೊಂದಕ್ಕೆ ಕಟುಬಿದ್ದು ಸೌರಾಷ್ಟ್ರದಿಂದ ಸೋಮನಾಥನನ್ನು ಕರೆತಂದು ಇಲ್ಲಿಯ ಬಸದಿಯೊಂದರಲ್ಲಿ ಸ್ಥಾಪಿಸಿ, ಧಾರ್ಮಿಕ ಕ್ರಾಂತಿಯನ್ನು ಮಾಡಿದನೆಂಬ ಐತಿಹ್ಯವಿದೆ.

ವಾಸ್ತು ಶಿಲ್ಪದನ್ವಯ ಈ ದೇವಾಲಯವು ನಕ್ಷತ್ರಾಕಾರವಾಗಿದೆ. ದೇವಾಲಯದ ಮೇಲ್ಛಾವಣೆಯಲ್ಲಿ– ಭೈರವಿ, ಶಿವ, ವಿಷ್ಣು, ಶಕ್ತಿ, ನಟರಾಜ, ಗಣೇಶ, ವೀರಭದ್ರ, ವೇಣುಗೋಪಾಲ ಮುಂತಾದ ಶಿಲ್ಪಗಳ ಕೆತ್ತನೆ ಸುಂದರವಾಗಿದೆ. ಈ ಶಿಖರದ ದಕ್ಷಿಣ ಭಾಗದಲ್ಲಿ ಬ್ರಹ್ಮ, ಶಿವ, ಯಕ್ಷರನ್ನು ; ಪಶ್ಚಿಮ ಭಾಗದಲ್ಲಿ ಶಕ್ತಿ ಸರಸ್ವತಿಯನ್ನು; ಉತ್ತರ ದಿಕ್ಕಿನಲ್ಲಿ ಶಿವನ ಮೂರ್ತಿಗಳನ್ನು ಕಾಣಬಹುದು. ಇದರ ಕಳಶವನ್ನು ಲಿಂಗೈಕ್ಯ ಶ್ರೀ ಶ್ರೀ ಶ್ರೀ 1008 ರಂಭಾಪುರಿ ವೀರ ಗಂಗಾಧರ ಜಗದ್ಗುರುಗಳವರು ಪ್ರತಿಷ್ಠಾಪಿಸಿದ್ದಾರೆ.

ಗುಡಿಯ ಸುತ್ತಲೂ ವಿಜಯನಗರ ಅರಸರು ಕಟ್ಟಿಸಿದ ಕಾಡುಕಲ್ಲಿನ ಕೋಟೆ ಇದೆ. ದಕ್ಷಿಣದ್ವಾರದ ಎಡಬದಿಯ ಮೇಲ್ಭಾಗದಲ್ಲಿ ಸೋಮೇಶ್ವರ, ಶಿವರಾಮ, ಒಡೆಯರು ಹಾಗೂ ಜಕ್ಕಣ್ಣ ಮುಂತಾದ ಮೂರ್ತಿಗಳಿವೆ. ಉತ್ತರ ಹಾಗೂ

ಪೂರ್ವಕ್ಕೆ ಇರುವ ದ್ವಾರಮಂಟಪಗಳು ಬಹು ವಿಶಾಲವಾಗಿದ್ದು, ಚಾಲುಕ್ಯರ ಕಾಲದ ಶಿಲ್ಪಶೈಲಿಯಲ್ಲಿವೆ. ಗುಡಿಯ ಹಿಂಬದಿಯಲ್ಲಿ ಸುಮಾರು 100 ಅಡಿ ಆಳದ ಸುಂದರವಾದ ಹೊಂಡವಿದ್ದು, ಇದನ್ನು ಗೌರಿ ಎಂಬುವಳು ಕಟ್ಟಿಸಿದ ಶಾಸನವಿದೆ. ಗರ್ಭಗುಡಿಯಲ್ಲಿ ಸುಮಾರು 4 ಅಡಿ ಎತ್ತರ ಹಾಗೂ 3 ಅಡಿ ಅಗಲದ ಸ್ವಯಂಭೂ ಸೋಮೇಶ್ವರನಿದ್ದಾನೆ. ಮೂರ್ತಿಯ ಅಲಂಕಾರಗಳು ವೈವಿಧ್ಯತೆಯಿಂದ ಸರ್ವಾಂಗ ಸುಂದರವಾಗಿ ಕಾಣಿಸುತ್ತವೆ.

**ಲಕ್ಷ್ಮೀಲಿಂಗನ ಗುಡಿ**

ಲಕ್ಷ್ಮಣೇಶ್ವರವು ತ್ರಿಕೂಟವಾದುದರಿಂದ ಮೂರು ಗರ್ಭಗುಡಿಗಳನ್ನು ಹೊಂದಿವೆ. ವಿಶಾಲವಾದ ಸಭಾ ಮಂಟಪವಿದ್ದು ಅದಕ್ಕೆ ಮೂರು ದ್ವಾರಗಳಿವೆ. ನವರಂಗದ ಮಧ್ಯದ ಅಂಗಳದಲ್ಲಿ ಅಲಂಕಾರಯುತವಾದ ಭುವನೇಶ್ವರಿ, ಅಷ್ಟದಿಕ್ಪಾಲಕರ ಮೂರ್ತಿಗಳು, ನೃತ್ಯ ಭಂಗಿಯಲ್ಲಿರುವ ಸಂಗೀತಗಾರರು, ಪದ್ಮ ಮುಂತಾದ ಸಂಕೇತಗಳನ್ನು ಇಲ್ಲಿ ಗುರುತಿಸಬಹುದು. ಒಟ್ಟಾರೆ ಲಕ್ಷ್ಮೀಲಿಂಗನ ಗುಡಿಯು ; ಪುಲಿಗೆರೆ ಹೆಸರನ್ನು ಲಕ್ಷ್ಮೇಶ್ವರ ಎಂದು ಬದಲಾಗಲು ಕಾರಣವಾದಂಥ ಪ್ರಮುಖ ದೇವಾಲಯವಾಗಿದೆ.

**ಬಾಳೇಶ್ವರ ದೇವಾಲಯ**

ಲಕ್ಷ್ಮೇಶ್ವರದಲ್ಲಿನ ಪ್ರಮುಖ ದೇವಾಲಯಗಳಲ್ಲೊಂದು. ಇಲ್ಲಿನ ಗೋಡೆಯ ಮೇಲೆ ನೃತ್ಯ ಗಣೇಶ, ನಟರಾಜ, ಅಷ್ಟಭುಜದ ಗಜಾಸುರ, ಉಗ್ರನರಸಿಂಹ, ಕಾಳಿದೇವಿ, ಮಹಿಷಾಸುರ ಮರ್ಧಿನಿ ಮುಂತಾದ ಶಿಲ್ಪ ಕಲೆಗಳು ಅತ್ಯಂತ ನೈಜವಾಗಿವೆ. ನಗರದ ಇನ್ನಾವ ದೇವಾಲಯಗಳಲ್ಲೂ ಕಾಣಸಿಗದ ಮೂರ್ತಿಗಳು ಇಲ್ಲಿವೆ.

**ಸಹಸ್ರಲಿಂಗ**

ಊರಿನ ಆಗ್ನೇಯ ದಿಕ್ಕಿನಲ್ಲಿದ್ದು, ಒಂದೇ ಲಿಂಗದಲ್ಲಿ ಚಿಕ್ಕ ಚಿಕ್ಕ 999 ಲಿಂಗಗಳ ಕೆತ್ತನೆ ಇದೆ. ಒಂದು ವೇಳೆ ಶಿಲ್ಪಿಯ ಸಾವಿರ ಲಿಂಗ ಕೆತ್ತನೆಯ ಸಂಕಲ್ಪ ಪೂರ್ಣಗೊಂಡಿದ್ದರೆ-ದಕ್ಷಿಣ ಭಾರತದ ರಾಮೇಶ್ವರದ ಮಹತ್ವ ಈ ನಗರಕ್ಕೆ ಪ್ರಾಪ್ತವಾಗುತ್ತಲಿತ್ತು ಎಂಬುದು ಪುರಾಣಕಾರರ ಅಭಿಪ್ರಾಯ.

**ಶಂಖ ಬಸದಿ**

ಚಾಲುಕ್ಯರ ವಾಸ್ತುಶಿಲ್ಪ ಮಾದರಿಯ ಅಳಿದುಳಿದ ಬಸದಿಗಳಲ್ಲಿ ಶಂಖ ಬಸದಿ ಒಂದು. ಇಲ್ಲಿನ ಸಹಸ್ರಕೂಟ ಜಿನ ಬಿಂಬವು ಅತ್ಯಂತ ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ. ಸಾವಿರ ಜಿನಬಿಂಬ ಇರುವ ಒಂದೇ ಶಿಲ್ಪ ಇಲ್ಲಿದೆ. 24 ತೀರ್ಥಂಕರರ ಪಾದಗಳ ಗುರುತುಗಳು ಇಲ್ಲಿ ನೋಡಲು ಸಿಗುತ್ತವೆ. ಬಸದಿ ಶಂಖಾಕಾರವಾಗಿದ್ದು, ಒಂದು ಕಾಲದಲ್ಲಿ ಅತ್ಯಂತ ಪ್ರಸಿದ್ಧವಾಗಿತ್ತು. ಬಸದಿಯ ಎದುರಿಗೆ ಒಂದು ಮಾನಸ್ತಂಭವಿದೆ.

**ಅನಂತಸ್ವಾಮಿ ಬಸದಿ**

ಕ್ರಿ.ಶ. 1250ರಲ್ಲಿ ಈ ಬಸದಿ ನಿರ್ಮಾಣಗೊಂಡಿದೆ. ಅನಂತ ಹುಣ್ಣಿಮೆಯಂದು ಈ ಬಸದಿಗೆ ವಿಶೇಷವಾದ ಪೂಜೆ ಸಲ್ಲಿಸಲಾಗುತ್ತಿದೆ. ಚಾಲುಕ್ಯ ಸೋಮೇಶ್ವರನ ಕಾಲದಿಂದ ಜೈನರ ಪರಭಾವ ಕ್ರಮೇಣ ಇಳಿಮುಖವಾಯಿತೆಂದು ಹೇಳಬಹುದು. ಲಕ್ಷ್ಮೇಶ್ವರದಲ್ಲಿ ಗೊಗ್ಗಯ ಬಸದಿ, ವಿಜಯ ಬಸದಿ, ಶಂಖ ಬಸದಿ ಮುಂತಾದ ಬಸದಿಗಳಿದ್ದವೆಂದು ಶಾಸನಗಳಲ್ಲಿದೆ.

**ಜುಮ್ಮಾ ಮಸೀದಿ**

ಪುಲಿಗೆರೆಯನ್ನು ಮುಸಲ್ಮಾನರೂ ಆಳಿದ್ದಾರೆ. ಬಿಜಾಪೂರದ ಆದಿಲ್‌ಶಾಹಿಯ ಅಂಕಿತದಲ್ಲಿ ಅಂಕುಶಖಾನನೆಂಬ ಮಾಂಡಲೀಕ ಇದನ್ನು ಆಳುತ್ತಿದ್ದಾಗ ಪೇಟೆಯಲ್ಲಿನ ಈ ಮಸೀದಿ ಕಟ್ಟಿಸಿದ್ದಾನೆ. ಶಿಲ್ಪ ಕಲಾಭಿಮಾನಿಗಳಿಗೆ ರಸದೌತಣ ನೀಡುವ ಈ ಮಸೀದಿಯ ಹೊರ ವಲಯದಲ್ಲಿ ನೇತು ಬಿದ್ದಿರುವ ಕಲ್ಲಿನ ಸರಪಳಿ, ತುದಿಯಲ್ಲಿನ ಕಲ್ಲಿನ ಗಂಟೆ ಎಂಥವರನ್ನೂ ಅಚ್ಚರಿಗೊಳಿಸುತ್ತದೆ. ಅಂಕುಶಖಾನ ಕಟ್ಟಿಸಿದ ದೊಡ್ಡವಾಡೆ ಈಗ ಹಾಳು ಬಿದ್ದಿದೆ. ಅಲ್ಲಿ ಈಗ ಕೋರ್ಟು, ಟ್ರೆಝುರಿ ಹಾಗೂ ಪೋಲಿಸ್ ವಸತಿ ಗೃಹಗಳಿವೆ.

**ದೂದಪೀರಾ ದರ್ಗಾ**

ಊರಿನ ಉತ್ತರ ಭಾಗಕ್ಕಿರುವ ಇದಕ್ಕೆ ಆಸಾರ ಎಂದೂ ಕರೆಯಲಾಗುತ್ತದೆ. 19ನೇ ಶತಮಾನದಲ್ಲಿ ಬಾಳಿ ಬದುಕಿದ ಈತ ಕೇವಲ ಹಾಲನ್ನೇ ಸೇವಿಸುತ್ತಿದ್ದನಾದ್ದರಿಂದ ದೂದಪೀರಾಂ ಎಂಬ ಹೆಸರು ಬಂದಿದೆ. ಊರಿಗೊಮ್ಮೆ ಕಾಲರಾ ಬಂದಾಗ ಅದನ್ನು ಹೋಗಲಾಡಿಸಿದ ಪವಾಡ–ಪುರುಷನೀತ, ಅವರ ಮರಣಾನಂತರ ಹಂದಿಗನೂರ ಬಸವಂತರಾವ್ ದೇಸಾಯಿಯವರಿಗೆ ಪುನಃ ದರ್ಶನಕೊಟ್ಟನಂತೆ. ಅವನ ಹೇಳಿಕೆಯನ್ವಯ ಅಲ್ಲಿ ಭೂಗತ ದ್ರವ್ಯ ದೊರೆತು, ಅದರ ಕುರುಹಿಗಾಗಿ, ದೇಸಾಯಿಯವರು 1903ರಲ್ಲಿ ಆಸಾರದಲ್ಲಿ ಖಬರಸ್ತಾನ ಕಟ್ಟಿಸಿದ್ದಾರೆ. ಪ್ರತಿ ಅಮವಾಸ್ಯೆಗೆ ಅಸಂಖ್ಯಾತ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಪ್ರತಿ ಫೆಬ್ರುವರಿ ತಿಂಗಳಲ್ಲಿ ಉರುಸು ವಿಜೃಂಭಣೆಯಿಂದ ಜರುಗುತ್ತದೆ.

**ಮುಕ್ತಿಮಂದಿರ**

ನಗರದ ನೈರುತ್ಯ ದಿಕ್ಕಿಗೆ 4 ಕಿ.ಮೀ. ದೂರದಲ್ಲಿ ಈ ಧರ್ಮಕ್ಷೇತ್ರವಿದೆ. ಪಂಚಪೀಠಗಳಲ್ಲಿ ಒಂದಾದ ರಂಭಾಪುರಿ ಪೀಠದ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಮಹಾಸ್ವಾಮಿಗಳು 1940ರಲ್ಲಿ ಈ ಧರ್ಮಕ್ಷೇತ್ರವನ್ನು ಸ್ಥಾಪಿಸಿದ್ದಾರೆ. ಶಿಶುನಾಳ ಶರೀಫರು ಈ ಜಾಗೆಯಲ್ಲಿ ಹೊರಟಿದ್ದಾಗ ಅವರ ಚಿಲುಮೆ ಇಲ್ಲಿ ಬಿದ್ದಿತಂತೆ,

ಆಗ ಅವರು ಇದು ಒಂದು ಪುಣ್ಯಕ್ಷೇತ್ರವಾಗುತ್ತದೆ ಎಂದು ಹೇಳಿದ ಮಾತು ಸತ್ಯವಾಗಿದೆ. ಇಲ್ಲಿ ಶಿವ–ಪಾರ್ವತಿ ಮಂದಿರ, ರೇಣುಕಾ ಮಂದಿರ, ದಾಸೋಹಮನೆ, ಶ್ರೀ ಗಂಗಾಧರ ಸ್ವಾಮಿಗಳ ಗದ್ದುಗೆ, ಭವ್ಯವಾದ ರೇಣುಕಾಚಾರ್ಯರ ಮೂರ್ತಿ, ಸರ್ವಧರ್ಮದ ದೇವರುಗಳ ಮಂದಿರಗಳು ಇಲ್ಲಿವೆ. ಶಿವರಾತ್ರಿ ಹಾಗೂ ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆಗಳು ಜರುಗುತ್ತಲಿವೆ. ಪೂಜ್ಯ ಜಗದ್ಗುರುಗಳ ಅವರ ವಾಣಿ– "ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ" ನಿತ್ಯ ಸತ್ಯವಾಗಿದೆ.

ಶ್ರೀ ಲಿಂಬಯ್ಯನವರು ಶಿರಸ್ಸನ್ನೇ ಛೇದಿಸಿಕೊಂಡು ಮೂರು ದಿವಸಗಳ ನಂತರ ಹಚ್ಚಿಕೊಂಡ ಪವಾಡದ ಮಠ–ಶಿರಸ್ಸು ಪವಾಡಮಠ ಅವರ ವಂಶಜರು ಇನ್ನೂ ಇದ್ದಾರೆ. ಊರಿನ ಹೊರವಲಯದಲ್ಲಿ ಕೋಡಿ ಎಲ್ಲಮ್ಮನ ಗುಡಿ ಇದ್ದು ಅನೇಕ ಭಕ್ತರನ್ನು ಆಕರ್ಷಿಸುತ್ತಲಿದೆ. ಅಲ್ಲಿ ಶಿಶುನಾಳ ಶರೀಫರು ಅಮವಾಸ್ಯೆಯನ್ನೇ ಹುಣ್ಣಿಮೆ ಮಾಡಿದ ಪವಾಡ ಹೇಳುತ್ತಾರೆ. ಮಹಾಂತಯ್ಯನಮಠ, ಅಗ್ನಿ ಸೋಮೇಶ್ವರ, ಕರೆಸಿದ್ದಪ್ಪನ ಮಠ, ವೀರಭದ್ರಗುಡಿ, ಮೈಲಾರಲಿಂಗ, ಭವಾನಿ ಗುಡಿಗಳು, ರಾಘವೇಂದ್ರ ಹಾಗೂ ಶಂಕರಭಾರತಿ ಮಠ ಹೀಗೆ ಹಲವಾರು ದೇವಾಲಯಗಳು ಊರಿನ ತುಂಬೆಲ್ಲಾ ಇವೆ. ಅಗಸ್ತ್ಯ, ಕಣ್ವ, ಶಂಕರ, ಲಕ್ಷ್ಮಣ, ಖಡ್ಗತೀರ್ಥಗಳೆಂಬ ಪಂಚ ತೀರ್ಥಗಳು ಇಲ್ಲಿದ್ದವು. ಹೀಗೆ ಪುರಾತನ ಕಾಲದಿಂದಲೂ ಪುಲಿಗೆರೆ ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಧಾರ್ಮಿಕ ನೆಲೆಗಟ್ಟಿನಿಂದ ಕೂಡಿದ ನಾಡಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಲಕ್ಷ್ಮೇಶ್ವರದ ಜೈನ, ವೀರಶೈವ, ವೈಷ್ಣವ ಮತ್ತು ಮುಸಲ್ಮಾನರ ವಾಸ್ತುಶಿಲ್ಪ ಕಲಾಶಿರಿಯನ್ನು ನೋಡಿದರೆ ಪ್ರಾಚೀನ ಕಾಲದಲ್ಲಿ ಇದೊಂದು ಪ್ರೇಕ್ಷಣೀಯ ಸ್ಥಳವಾಗಿತ್ತೆಂದು ಹೇಳಬಹುದು. ಇಲ್ಲಿ ಎಲ್ಲ ಜಾತಿ, ಮತ, ಪಂಥದವರು ನೆಲೆಸಿರುವರು. ಆದರೆ ಯಾರಲ್ಲಿಯೂ ಧರ್ಮ ಇಲ್ಲವೇ ಜಾತಿಯ ಮತಾಂಧತೆಯಿಲ್ಲ. ಹೀಗೆ ಎಲ್ಲ ನದಿಗಳು ಸಮುದ್ರವನ್ನು ಕೂಡುವಂತೆ ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತೇವೆ.

**ಪರಾಮರ್ಶನ/ಆಕರ ಗ್ರಂಥಗಳು**


- ಹಿರೇಮಠ ಆರ್.ಸಿ. ಮತ್ತು ಎಂ.ಎಸ್. ಸುಂಕಾಪೂರ. (1967). *ಸೋಮನಾಥ ಚಾರಿತ್ರೆ.* ಕರ್ನಾಟಕ ವಿಶ್ವವಿದ್ಯಾಲಯ.
- ಕಲಬುರ್ಗಿ ಎಂ.ಎಂ. (1973). *ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಸದಾನಂದ ಕನವಳ್ಳಿ ಮತ್ತು ಸಿ.ವ್ಹಿ. ಕೆರಿಮನಿ. (ಸಂ.) (1972). *ಪುಲಿಗೆರೆ.* ಎಂ.ಎ. ಕಾಲೇಜು, ಲಕ್ಷ್ಮೇಶ್ವರ.
- ಸೂರ್ಯನಾಥ. ಯು. ಕಾಮತ. (ಸಂ.). (1995). *ಕರ್ನಾಟಕ ರಾಜ್ಯ ಗೆಜೆಟಿಯರ್ ಧಾರವಾಡ ಜಿಲ್ಲೆ.* (ಪರಿಷ್ಕೃತ ಆವೃತ್ತಿ). ಕರ್ನಾಟಕ ಸರ್ಕಾರ.
- ಶ್ರೀ.ನಿ.ಪ್ರ.ಸ್ವ ಮೃತ್ಯುಂಜಯ ಮಹಾಸ್ವಾಮಿಗಳು. (1957). *ಆದಯ್ಯನ ವಚನಗಳು.* ಮುರುಘಾಮಠ.